# ದಕ್ಷಿಣ ಕನ್ನಡ-ಉಡುಪಿ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳು-2022

ದಿನಾಂಕ 15 ಜುಲೈ 2022 ಶುಕ್ರವಾರ

ಉದ್ಘಾಟನಾ ಕಾರ್ಯಕ್ರಮ : ಪೂರ್ವಾಹ್ನ 8.30

ಸ್ಪರ್ಧೆ ಆರಂಭವಾಗುವ ಸಮಯ : ಪೂರ್ವಾಹ್ನ ಘಂ. 9.00

## ಸ್ಪರ್ಧೆಗಳ ವಿವರ

| ಸ್ಪರ್ಧೆ | ವಿಭಾಗ | ಸೂಚಿತ ವಿಷಯ | ಅವಧಿ | ನಿಯಮಗಳು |
|---|---|---|---|---|
| ಕಥೆ ಹೇಳುವ ಸ್ಪರ್ಧೆ (Story Telling) | ಪುಟಾಣಿ ವಿಭಾಗ (UKG) | ಶ್ರೀ ಕೃಷ್ಣ ಲೀಲೆ | 2+1 ನಿಮಿಷ | ಶ್ರೀಕೃಷ್ಣನಿಗೆ ಸಂಬಂಧಿಸಿದ ಯಾವುದಾದರೂ ಕಥೆಯನ್ನು ಕನ್ನಡ, ಹಿಂದಿ ಅಥವಾ ಇಂಗ್ಲೀಷ್ ಭಾಷೆಯಲ್ಲಿ ಸಾಂಪ್ರದಾಯಿಕ ಉಡುಗೆಯೊಂದಿಗೆ ಪ್ರಸ್ತುತ ಪಡಿಸುವುದು. ಸ್ಪರ್ಧೆಯಲ್ಲಿ ಉಚ್ಚಾರ ಮತ್ತು ಸ್ಪಷ್ಟತೆಗೆ ಹೆಚ್ಚಿನ ಪ್ರಾಧ್ಯಾನ್ಯತೆ ನೀಡಲಾಗುವುದು. ಪ್ರತಿ ವಿಭಾಗದಲ್ಲಿ ಒಂದು ಶಾಲೆಯಿಂದ ಇಬ್ಬರು ಸ್ಪರ್ಧಾಳುಗಳಿಗೆ ಮಾತ್ರ ಅವಕಾಶ. |
| ಚಿತ್ರಕಲೆ (ವೈಯಕ್ತಿಕ) | ಶಿಶು (1–4ನೇ ತರಗತಿ) | ಐಚ್ಛಿಕ | 1½ ಗಂಟೆ | ಶಿಶು(1–4ನೇ ತರಗತಿ) ಮತ್ತು ಬಾಲ(5–7ನೇ ತರಗತಿ) ವಿಭಾಗದ ಸ್ಪರ್ಧಾಳುಗಳು ತಮ್ಮ ಚಿತ್ರವನ್ನು ಯಾವುದೇ ಮಾಧ್ಯಮದ ಸಹಾಯದಿಂದ ಪೂರ್ಣಗೊಳಿಸಬಹುದು. ಕಿಶೋರ(8–10ನೇ ತರಗತಿ) ವಿಭಾಗದ ಸ್ಪರ್ಧಾಳುಗಳು ವಿಷಯಕ್ಕೆ ಸಂಬಂಧಿಸಿದ ಚಿತ್ರವನ್ನು ರಚಿಸಿ ಜಲವರ್ಣದಿಂದ ಪೂರ್ಣಗೊಳಿಸಬೇಕು. ಈ ವಿಭಾಗದ ಸ್ಪರ್ಧಾಳುಗಳು ಪೆನ್, ಸ್ಕೆಚ್‌ಪೆನ್, ಮಾರ್ಕರ್‌ಗಳನ್ನು ಬಳಸುವಂತಿಲ್ಲ.<br>* 10 X 14 ಇಂಚು ಗಾತ್ರದ ಕಾಗದವನ್ನು ಒದಗಿಸಲಾಗುವುದು.<br>* ಚಿತ್ರ ರಚನೆಗೆ ಬೇಕಾದ ಇತರ ಸಾಮಾಗ್ರಿಗಳನ್ನು ಸ್ಪರ್ಧಾಳುಗಳೇ ತರತಕ್ಕದ್ದು.<br>* ಸ್ವಚ್ಛ ಮತ್ತು ಪ್ರಮಾಣಬದ್ಧ ಚಿತ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆ.<br>* ನಿಯಮಗಳನ್ನು ಉಲ್ಲಂಘಿಸಿದ ಅಥವಾ ಅಪೂರ್ಣ ಚಿತ್ರಗಳನ್ನು ಮಾನ್ಯ ಮಾಡಲಾಗುವುದಿಲ್ಲ.<br>* **ಪ್ರತೀ ವಿಭಾಗದಲ್ಲೂ ಒಂದು ಶಾಲೆಯಿಂದ ಇಬ್ಬರು ಸ್ಪರ್ಧಾಳುಗಳಿಗೆ ಮಾತ್ರ ಅವಕಾಶ.** |
| | ಬಾಲ (5–7ನೇ ತರಗತಿ) | ಐಚ್ಛಿಕ | 2 ಗಂಟೆ | |
| | ಕಿಶೋರ (8–10ನೇ ತರಗತಿ) | ನನ್ನ ಭಾರತ | 2½ ಗಂಟೆ | |
| ರಂಗೋಲಿ (ಗುಂಪು) | ಬಾಲ (5–7ನೇ ತರಗತಿ) | ರಂಗೋಲಿ ಪುಡಿಯಿಂದ ರಚನೆ (ಅಳತೆ 4X4 ಅಡಿ) | 1½ ಗಂಟೆ | ಬಾಲ ಮತ್ತು ಕಿಶೋರ ವರ್ಗದ ಸ್ಪರ್ಧಾಳುಗಳು ರಂಗೋಲಿಯನ್ನು ರಂಗೋಲಿ ಪುಡಿಯಿಂದ ಅಲಂಕರಿಸುವುದು. ಚುಕ್ಕಿ ರಂಗೋಲಿಯನ್ನೇ ರಚಿಸತಕ್ಕದ್ದು. 4X4 ಅಡಿ ಸ್ಥಳಾವಕಾಶವನ್ನು ನೀಡಲಾಗುತ್ತದೆ. **ಪ್ರತೀ ವಿಭಾಗದಲ್ಲೂ ಒಂದು ಶಾಲೆಯಿಂದ ಇಬ್ಬರನ್ನೊಳಗೊಂಡ ಒಂದು ತಂಡಕ್ಕೆ ಮಾತ್ರ ಅವಕಾಶ.** |
| | ಕಿಶೋರ (8–10ನೇ ತರಗತಿ) | | | |
| ಕರ್ನಾಟಕ ಶಾಸ್ತ್ರೀಯ ಸಂಗೀತ (ವೈಯಕ್ತಿಕ-ಹಾಡುಗಾರಿಕೆ) | ಬಾಲ (5–7ನೇ ತರಗತಿ) | ಮಧ್ಯಮಕಾಲ ಕೃತಿ | 4 + 1 ನಿಮಿಷ | ಬಾಲ(5–7ನೇ ತರಗತಿ) ವಿಭಾಗದ ಸ್ಪರ್ಧಾಳುಗಳು ತಮ್ಮ ಆಯ್ಕೆಯ ಪ್ರಸಿದ್ಧ ವಾಗ್ಗೇಯಕಾರರ ಮಧ್ಯಮಕಾಲ ಕೃತಿಯನ್ನು ಶೃತಿಯೊಂದಿಗೆ ಹಾಡತಕ್ಕದ್ದು. ರಾಗಾಲಾಪನೆ, ಸ್ವರಕಲ್ಪನೆ ಮತ್ತು ಮನೋಧರ್ಮಗಳಿಗೆ ಅವಕಾಶವಿಲ್ಲ. ಕಿಶೋರ(8–10ನೇ ತರಗತಿ) ವಿಭಾಗದ ಸ್ಪರ್ಧಾಳುಗಳು ತಿಲ್ಲಾನವನ್ನು ಶೃತಿಯೊಂದಿಗೆ ಹಾಡತಕ್ಕದ್ದು. **ಪ್ರತೀ ವಿಭಾಗದಲ್ಲೂ ಒಂದು ಶಾಲೆಯಿಂದ ಇಬ್ಬರು ಸ್ಪರ್ಧಾಳುಗಳಿಗೆ ಮಾತ್ರ ಅವಕಾಶ.** |
| | ಕಿಶೋರ (8–10ನೇ ತರಗತಿ) | ತಿಲ್ಲಾನ | 4 + 1 ನಿಮಿಷ | |
| ಭರತನಾಟ್ಯ (ಯುಗಳ) Duet | ಬಾಲ (5–7ನೇ ತರಗತಿ) | ಪುಷ್ಪಾಂಜಲಿ | 4 + 1 ನಿಮಿಷ | ನೃತ್ಯಕ್ಕೆ ಕಡ್ಡಾಯವಾಗಿ ಸೂಚಿತ ವಿಷಯವನ್ನು ಅಳವಡಿಸಿಕೊಂಡು ಶಾಸ್ತ್ರೀಯ ರೀತಿಯಲ್ಲಿ ಪ್ರದರ್ಶಿಸತಕ್ಕದ್ದು. ರಂಗಸಜ್ಜಿಕೆಯನ್ನು ಬಳಸುವಂತಿಲ್ಲ (No props or settings). ನಾಟ್ಯಕ್ಕೆ ಬೇಕಾದ CD/Pendrive ಅನ್ನು ಮೊದಲೇ ಹಾಡಿಗೆ ಸರಿಹೊಂದಿಸಿ ತರಬೇಕು, ಸ್ಪರ್ಧಾ ಅವಧಿಯಲ್ಲಿ ಯಾವುದೇ ಕಾರಣಕ್ಕೆ ವಿಳಂಬ ಮಾಡಬಾರದು. ಸ್ಪರ್ಧಾಳುಗಳು ಶಾಸ್ತ್ರೀಯ ಭರತನಾಟ್ಯ ಉಡುಗೆ – ತೊಡುಗೆಯಲ್ಲೇ ಭಾಗವಹಿಸುವುದು. **ಪ್ರತೀ ವಿಭಾಗದಲ್ಲೂ ಒಂದು ಶಾಲೆಯಿಂದ ಇಬ್ಬರನ್ನೊಳಗೊಂಡ ಎರಡು ತಂಡಗಳಿಗೆ ಮಾತ್ರ ಅವಕಾಶ.** |
| ನೃತ್ಯ ಭಜನೆ (ಗುಂಪು) | ಬಾಲ (5–7ನೇ ತರಗತಿ) | ದೇವರನಾಮ | 5 + 1 ನಿಮಿಷ | ಸ್ಪರ್ಧಾಳುಗಳು ಸಾಂಪ್ರದಾಯಿಕ ಉಡುಗೆಯೊಂದಿಗೆ ಭಜನೆಯನ್ನು ಅವರೇ ಹಾಡಿ ಕುಣಿಯಬೇಕು. ದಾಸರ ಕೃತಿಗೆ ಮಾತ್ರ ಅವಕಾಶ (ಕನ್ನಡ ಸಾಹಿತ್ಯ ಮಾತ್ರ). **ಪ್ರತೀ ವಿಭಾಗದಲ್ಲೂ ಒಂದು ಶಾಲೆಯಿಂದ ಗರಿಷ್ಠ 10 ಮಂದಿಯನ್ನೊಳಗೊಂಡ ಒಂದು ತಂಡಕ್ಕೆ ಮಾತ್ರ ಅವಕಾಶ** (ಪಕ್ಕವಾದ್ಯ ಸಹಿತ). |
| ಶಂಖನಾದ (ವೈಯಕ್ತಿಕ) | ಕಿಶೋರ (8–10ನೇ ತರಗತಿ) | —— | 1 ನಿಮಿಷ | ಒಂದು ನಿಮಿಷದ ಕಾಲಾವಧಿಯಲ್ಲಿ ಸುಶ್ರಾವ್ಯವಾಗಿ, ಅಖಂಡವಾಗಿ ಮತ್ತು ಸುದೀರ್ಘವಾಗಿ ಸಾಂಪ್ರದಾಯಿಕ ಉಡುಗೆಯೊಂದಿಗೆ ಶಂಖನಾದಗೈಯುವುದು. ಶಂಖವನ್ನು ಸ್ಪರ್ಧಾರ್ಥಿಗಳೇ ತರತಕ್ಕದ್ದು. ಒಚಿದು ಶಾಲೆಯಿಂದ ಇಬ್ಬರು ಸ್ಪರ್ಧಾಳುಗಳಿಗೆ ಮಾತ್ರ ಅವಕಾಶ. |

## ಸ್ಪರ್ಧೆ ಆರಂಭವಾಗುವ ಸಮಯ : ಪೂರ್ವಾಹ್ನ 9.00

| ಸ್ಪರ್ಧೆ | ವಿಭಾಗ | ಸೂಚಿತ ವಿಷಯ | ನಿಯಮಗಳು |
|---|---|---|---|
| ಗೀತಾ ಕಂಠಪಾಠ | ಶಿಶು (1–4ನೇ ತರಗತಿ) | 6ನೇ ಅಧ್ಯಾಯದ ಮೊದಲ 8 ಶ್ಲೋಕಗಳು | ಸ್ಪರ್ಧಾಳುಗಳು ಸಾಂಪ್ರದಾಯಿಕ ಉಡುಗೆಯೊಂದಿಗೆ ನಿಗದಿಪಡಿಸಿದ ಅಧ್ಯಾಯ ಹಾಗೂ ಶ್ಲೋಕಗಳನ್ನೇ ಹೇಳುವುದು. ಸ್ಪರ್ಧೆಯಲ್ಲಿ ಉಚ್ಚಾರ ಮತ್ತು ಸ್ಪಷ್ಟತೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುವುದು. ನಿಗದಿಗೊಳಿಸಲಾಗಿರುವ ಶ್ಲೋಕಗಳಲ್ಲಿ ನಿರ್ಣಾಯಕರು ಕೇಳಿದ ಶ್ಲೋಕವನ್ನು ಹೇಳಲು ಸಿದ್ಧರಿರಬೇಕು. **ಪ್ರತೀ ವಿಭಾಗದಲ್ಲೂ ಒಂದು ಶಾಲೆಯಿಂದ ಇಬ್ಬರು ಸ್ಪರ್ಧಾಳುಗಳಿಗೆ ಮಾತ್ರ ಅವಕಾಶ.** |
| | ಬಾಲ (5–7ನೇ ತರಗತಿ) | 6ನೇ ಅಧ್ಯಾಯದ ಮೊದಲ 12 ಶ್ಲೋಕಗಳು | |
| | ಕಿಶೋರ (8–10ನೇ ತರಗತಿ) | 6ನೇ ಅಧ್ಯಾಯದ ಮೊದಲ 15 ಶ್ಲೋಕಗಳು | |

## ಸ್ಪರ್ಧೆ ಆರಂಭವಾಗುವ ಸಮಯ : ಅಪರಾಹ್ನ 2.00

| ಸ್ಪರ್ಧೆ | ವಿಭಾಗ | ಸೂಚಿತ ವಿಷಯ | ಅವಧಿ | ನಿಯಮಗಳು |
|---|---|---|---|---|
| ಭರತನಾಟ್ಯ (ಯುಗಳ) Duet | ಕಿಶೋರ (8–10ನೇ ತರಗತಿ) | ತಿಲ್ಲಾನ | 5 + 1 ನಿಮಿಷ | ನೃತ್ಯಕ್ಕೆ ಕಡ್ಡಾಯವಾಗಿ ಸೂಚಿತ ವಿಷಯವನ್ನು ಅಳವಡಿಸಿಕೊಂಡು ಶಾಸ್ತ್ರೀಯ ರೀತಿಯಲ್ಲಿ ಪ್ರದರ್ಶಿಸತಕ್ಕದ್ದು. ರಂಗಸಜ್ಜಿಕೆಯನ್ನು ಬಳಸುವಂತಿಲ್ಲ (No props or settings). ನಾಟ್ಯಕ್ಕೆ ಬೇಕಾದ CD/Pendrive ಅನ್ನು ಮೊದಲೇ ಹಾಡಿಗೆ ಸರಿಹೊಂದಿಸಿ ತರಬೇಕು, ಸ್ಪರ್ಧಾ ಅವಧಿಯಲ್ಲಿ ಯಾವುದೇ ಕಾರಣಕ್ಕೆ ವಿಳಂಬ ಮಾಡಬಾರದು. ಸ್ಪರ್ಧಾಳುಗಳು ಶಾಸ್ತ್ರೀಯ ಭರತನಾಟ್ಯ ಉಡುಗೆ – ತೊಡುಗೆಯಲ್ಲೇ ಭಾಗವಹಿಸುವುದು. **ಪ್ರತೀ ವಿಭಾಗದಲ್ಲೂ ಒಂದು ಶಾಲೆಯಿಂದ ಇಬ್ಬರನ್ನೊಳಗೊಂಡ ಎರಡು ತಂಡಗಳಿಗೆ ಮಾತ್ರ ಅವಕಾಶ.** |
| ನೃತ್ಯ ಭಜನೆ (ಗುಂಪು) | ಕಿಶೋರ (8–10ನೇ ತರಗತಿ) | ದೇವರನಾಮ | 5 + 1 ನಿಮಿಷ | ಸ್ಪರ್ಧಾಳುಗಳು ಸಾಂಪ್ರದಾಯಿಕ ಉಡುಗೆಯೊಂದಿಗೆ ಭಜನೆಯನ್ನು ಅವರೇ ಹಾಡಿ ಕುಣಿಯಬೇಕು. ದಾಸರ ಕೃತಿಗೆ ಮಾತ್ರ ಅವಕಾಶ (ಕನ್ನಡ ಸಾಹಿತ್ಯ ಮಾತ್ರ). **ಪ್ರತೀ ವಿಭಾಗದಲ್ಲೂ ಒಂದು ಶಾಲೆಯಿಂದ ಗರಿಷ್ಠ 10 ಮಂದಿಯನ್ನೊಳಗೊಂಡ ಒಂದು ತಂಡಕ್ಕೆ ಮಾತ್ರ ಅವಕಾಶ** (ಪಕ್ಕವಾದ್ಯ ಸಹಿತ). |

## ಸಾಮಾನ್ಯ ನಿಯಮಗಳು :

- **ಸ್ಪರ್ಧಾರ್ಥಿಗಳು ಶಾಲಾ ಸಮವಸ್ತ್ರವನ್ನು ಧರಿಸಿ ಸ್ಪರ್ಧೆಗೆ ಹಾಜರಾಗುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.**
- ಸ್ಪರ್ಧಾಳುಗಳು ಸ್ಪರ್ಧೆ ಆರಂಭವಾಗುವ ಅರ್ಧ ಘಂಟೆ ಮೊದಲು ಬಂದು ತಮ್ಮ ಹಾಜರಾತಿಯನ್ನು ಖಚಿತಪಡಿಸತಕ್ಕದ್ದು.
- ಭಾಗವಹಿಸಿದ ಎಲ್ಲ ಸ್ಪರ್ಧಾಳುಗಳಿಗೂ ಪ್ರಮಾಣ ಪತ್ರವನ್ನು ಸ್ಪರ್ಧೆಯ ದಿನದಂದು ನೀಡಲಾಗುವುದು.
- ಬಹುಮಾನಗಳು : ಪ್ರತಿ ಸ್ಪರ್ಧೆಯ ಪ್ರತಿ ವಿಭಾಗದಲ್ಲೂ ಪ್ರಥಮ, ದ್ವಿತೀಯ ಹಾಗೂ ತೃತೀಯ ನಗದು ಬಹುಮಾನಗಳನ್ನು ಸ್ಪರ್ಧೆ ಮುಗಿದ ಬಳಿಕ ಅದೇ ದಿನ ನೀಡಲಾಗುವುದು.
- ತೀರ್ಪುಗಾರರ ತೀರ್ಮಾನವೇ ಅಂತಿಮ.
- ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳಿಗೂ ಭೋಜನದ ವ್ಯವಸ್ಥೆಯನ್ನು ಮಾಡಲಾಗುವುದು.
- ಪ್ರವೇಶ ಪತ್ರ, ಸ್ಪರ್ಧೆಗಳ ವಿವರಗಳು ಮತ್ತು ಸ್ಪರ್ಧೆಯ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಆದೇಶದ ಪ್ರತಿಗಳು www.sharadavidyalaya.in ನಲ್ಲಿ ಲಭ್ಯ.
- **ಒಬ್ಬರು ಒಂದು ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸತಕ್ಕದ್ದು.**

ಸ್ಪರ್ಧೆಯಲ್ಲಿ ಭಾಗವಹಿಸಲು ತಮ್ಮ ಸಂಸ್ಥೆಯ ಅಧಿಕೃತ ಇಮೇಲ್ ಮೂಲಕ ಗೂಗಲ್ ಫಾರ್ಮ್ (Google Form) ಭರ್ತಿ ಮಾಡಿ ಹೆಸರನ್ನು ನೋಂದಾಯಿಸಬೇಕು. ತಮ್ಮ ಸಂಸ್ಥೆಯ ಇಮೇಲ್ ವಿಳಾಸಕ್ಕೆ ಗೂಗಲ್ ಫಾರ್ಮ್ ಲಿಂಕ್ ಅನ್ನು ಕಳುಹಿಸಲಾಗಿದೆ. ಸಿಗದೇ ಇದ್ದಲ್ಲಿ ತಮ್ಮ ಸಂಸ್ಥೆಯ ಅಧಿಕೃತ ಇಮೇಲ್ ವಿಳಾಸದಿಂದ ಮುಖ್ಯಸ್ಥರ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು sharadamahotsava@gmail.com ಗೆ ಕಳುಹಿಸಿದಲ್ಲಿ ತಕ್ಷಣವೇ ಗೂಗಲ್ ಫಾರ್ಮ್ ಲಿಂಕ್ ಅನ್ನು ಕಳುಹಿಸಿಕೊಡಲಾಗುವುದು. **ಹೆಸರು ನೋಂದಾಯಿಸಲು ಕೊನೆಯ ದಿನಾಂಕ 10-07-2022.**

**ಹೆಚ್ಚಿನ ವಿವರಗಳಿಗೆ ವಿದ್ಯಾಲಯದ ಕಾರ್ಯಾಲಯವನ್ನು ಸಂಪರ್ಕಿಸಿ. ದೂರವಾಣಿ : 0824 - 2492628, 2493089**